ಈ) ಇದು ಸತ್ಯಕ್ಕೆ ದೂರವಾಗಿದೆ. ಕೈಗಾರಿಕಾ ಇಲಾಖೆಯ ಆಯುಕ್ತರು ಮಂಡಳಿಯ ಸದಸ್ಯರಾಗಿರುತ್ತಾರೆ. ಕೈಗಾರಿಕೆ ಇಲಾಖೆಯವರು ನಡೆಸಿದ ಎಲ್ಲಾ ಸಭೆಗಳಿಗೆ ಮಂಡಳಿಯ ಅಧಿಕಾರಿಗಳು ಭಾಗವಹಿಸುತ್ತಿದ್ದಾರೆ. ಅಲ್ಲದೆ ಮಂಡಳಿಯ ಅಧ್ಯಕ್ಷರು ಕೈಗಾರಿಕೆ ಇಲಾಖೆಯ ವಿವಿಧ ಸಮಿತಿಗಳ ಸದಸ್ಯರಾಗಿರುತ್ತಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹಾಗೂ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ :- ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಕಾರ್ಖಾನೆಗಳ ಮಾರಾಟ ಮಾಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2310 (2616).

ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ?

ಆ) ಅವುಗಳಲ್ಲಿ ಎಷ್ಟು ಆವೃಣ ಸ್ಥಿತಿಯಲ್ಲಿ ಇವೆ

ಇ) ಎಷ್ಟು ಸಕ್ಕರೆ ಕಾರ್ಖಾನೆಯು ಲಾಭದಲ್ಲಿವೆ ಹಾಗೂ ಎಷ್ಟು ಕಾರ್ಖಾನೆಯು ನಷ್ಟದಲ್ಲಿವೆ.

ಈ) ಈಗ ಹೊಸದಾಗಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಪರವಾನಿಗೆಯನ್ನು ನೀಡಲಾಗಿದೆ

ಉ) ಒಂದು ಸಕ್ಕರೆ ಕಾರ್ಖಾನೆಗೆ ಅಂದಾಜು ಎಷ್ಟು ವೆಚ್ಚ ಬರಬಹುದು

ಊ) ಒಂದು ಸಕ್ಕರೆ ಕಾರ್ಖಾನೆಗೆ ರಾಜ್ಯದಿಂದ ಹಾಗೂ ಕೇಂದ್ರಸರ್ಕಾರದಿಂದ ಸಿಗುವ ಹಣವೆಷ್ಟು?

ಋ) ಒಂದು ಸಕ್ಕರೆ ಕಾರ್ಖಾನೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ಲಾಭ ಎಷ್ಟು (ತೆರಿಗೆಗಳಿಂದ)

ಋೂ) ಈ ವರ್ಷದ ಬಜೆಟ್ ಆಯವ್ಯಯದಲ್ಲಿ ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಗಾಗಿ ನಿಗದಿಪಡಿಸಿರುವ ಹಣವೆಷ್ಟು?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :-

ಅ) 30

ಆ) ಇಲ್ಲ

ಇ) 1993-94 ರ ಸಾಲಿಗೆ ಸಂಬಂಧಿಸಿದಂತೆ 17 ಕಾರ್ಖಾನೆಗಳು ಲಾಭದಲ್ಲೂ ಹಾಗೂ 13 ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿರುತ್ತವೆ.

ಈ) 8 ಕಾರ್ಖಾನೆಗಳಿಗೆ ಭಾರತ ಸರ್ಕಾರ ಪರವಾನಿಗೆಯನ್ನು ನೀಡಿದೆ.

ಉ) ಹೊಸದಾಗಿ ಸ್ಥಾಪಿಸಲ್ಪಡುವ 2500 ಟನ್ ಸಾಮರ್ಥ್ಯದ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ರೂ. 4200-00 ಲಕ್ಷ ಯೋಜನಾ ವೆಚ್ಚ ತಗಲುವ ಅಂದಾಜಿರುತ್ತದೆ.

ಊ) ಸಹಕಾರಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಮಾತ್ರ ಸರ್ಕಾರದಿಂದ ನೆರವು ದೊರೆಯುತ್ತದೆ. ಹೊಸ ಕಾರ್ಖಾನೆಯ ಯೋಜನಾ ವೆಚ್ಚದಲ್ಲಿ ಶೇಕಡ 30-00 ರಷ್ಟನ್ನು ಷೇರುಧನದ ರೂಪದಲ್ಲಿ ರಾಜ್ಯ ಸರ್ಕಾರವು ನೀಡುತ್ತದೆ. ಹೀಗೆ ರಾಜ್ಯ ಸರ್ಕಾರವು ನೀಡುತ್ತದೆ. ಹೀಗೆ ರಾಜ್ಯ ಸರ್ಕಾರವು ನೀಡುವ ಷೇರು ಧನದ ಹಣದಲ್ಲಿ ರಾಷ್ಟ್ರೀಯ ಸಹಕಾರಾಭಿವೃದ್ಧಿ ನಿಗಮವು ಹಿಂದುಳಿದ ಪ್ರದೇಶವಾಗಿದ್ದರೆ ಶೇಕಡ 65-00 ರಷ್ಟನ್ನು, ಇತರೆ ಪ್ರದೇಶವಾದರೆ ಶೇಕಡ 50-00 ರಷ್ಟನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಿಕೊಡುತ್ತದೆ.

ಋ) ಒಂದು 2500 ಟನ್ ಸಾಮರ್ಥ್ಯದ ಸಕ್ಕರೆ ಕಾರ್ಖಾನೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ವಿವಿಧ ತೆರಿಗೆಗಳಿಂದ ಪ್ರತಿವರ್ಷ ಸುಮಾರು ರೂ. 828-00 ಲಕ್ಷ ಆದಾಯ ಬರುವ ಅಂದಾಜಿರುತ್ತದೆ.

ಋೂ) ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಷೇರು ಬಂಡವಾಳ ಒದಗಿಸಲು ರೂ. 430-00 ಲಕ್ಷಗಳನ್ನು ಆಯವ್ಯಯದಲ್ಲಿ ಕಾಯ್ದಿರಿಸಲಾಗಿದೆ.

ವಿಷಯ :- ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಕಾರ್ಖಾನೆಗಳನ್ನೂ ಮಾರಾಟ ಮಾಡುವ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 2311 (2719)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಕಾರ್ಖಾನೆಗಳು ಎಷ್ಟು; (ಜಿಲ್ಲಾವಾರು ವಿವರ ತಿಳಿಸುವುದು).

ಆ) ಎಷ್ಟು ಕಾರ್ಖಾನೆಗಳು ಲಾಭದಲ್ಲಿವೆ ;
ಲಾಭದಲ್ಲಿದ್ದರೆ 1992 ರಿಂದ ಆದರ ಒಟ್ಟು ಲಾಭವೆಷ್ಟು ;

ಇ) ಎಷ್ಟು ಕಾರ್ಖಾನೆಗಳು ನಷ್ಟದಲ್ಲಿವೆ? ನಷ್ಟದಲ್ಲಿರುವ ಕಾರ್ಖಾನೆಗಳನ್ನು ಮಾರಾಟ ಮಾಡಲು ಸರ್ಕಾರ ಯೋಜನೆ ಮಾಡಿದೆಯೇ, ಯೋಜನೆಯಾಗಿದ್ದಲ್ಲಿ ಯಾವ ಯಾವ ಕರಾರಿಗೊಳಪಡಿಸಿ ನಷ್ಟದ ಕಾರ್ಖಾನೆಗಳನ್ನು ಮಾರಾಟ ಮಾಡಲಾಗುವುದು;